**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)** :– ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕೆ.ಎಲ್.ಇ. ಟೆಕ್ನಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

**2012ನೇ ಸಾಲಿನ ಕೆ.ಎಲ್.ಇ. ಟೆಕ್ನಲಾಜಿಕಲ್ ವಿಶ್ವವಿದ್ಯಾಲಯ, ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು**

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು"ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.**

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು)**

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)** : ಮಾನ್ಯ ಅಧ್ಯಕ್ಷರೆ, ಟ್ರಾನ್ಸ್‌ಫರ್ ಬಿಲ್ ಕೌನ್ಸಿಲ್‌ನಿಂದ ಇಲ್ಲಿಗೆ ಬಂದಿದೆ. Transfer Bill ಟೆಕ್ನಿಕಲ್ ಡಿಪಾರ್ಟ್‌ಮೆಂಟ್‌ನದು ಕೌನ್ಸಿಲ್‌ನಿಂದ ಇಲ್ಲಿಗೆ ಬಂದಿದೆ.

**ಅಧ್ಯಕ್ಷರು** : ಆಯಿತು. ಈಗ ಗಮನ ಸೆಳೆಯುವ ಸೂಚನೆ. ಮಾನ್ಯ ವೈ.ಎನ್. ರುದ್ರೇಶ್‌ಗೌಡರು ಇಲ್ಲ. ಮಾನ್ಯ ಲಾಲಾಜಿ ಆರ್.ಮೆಂಡನ್‌ರವರು ಕೇಳಿ.

## 8. ಗಮನ ಸೆಳೆಯುವ ಸೂಚನೆಗಳು :

**1. ವಿಷಯ : ಕಾಪು ವಿಧಾನಸಭಾ ಕ್ಷೇತ್ರದ ಹಿರಿಯಡ್ಕ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು ತುಂಬಾ ಹಳೆಯದಾಗಿರುವುದರಿಂದ ಆಸ್ಪತ್ರೆಯ ದುರಸ್ತಿ ಮತ್ತು ಸಿಬ್ಬಂದಿಗಳನ್ನು ಭರ್ತಿ ಮಾಡುವ ಕುರಿತು.**

**ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)** : ಮಾನ್ಯ ಅಧ್ಯಕ್ಷರೆ, ಕಾಪು ವಿಧಾನಸಭಾ ಕ್ಷೇತ್ರದ ಹಿರಿಯಡ್ಕ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು ತುಂಬಾ ಹಳೆಯದಾಗಿರುವುದರಿಂದ ಆಸ್ಪತ್ರೆಯ ದುರಸ್ತಿ ಮತ್ತು ಸಿಬ್ಬಂದಿಗಳನ್ನು ಭರ್ತಿ ಮಾಡುವ ವಿಷಯವಾಗಿ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)** : ಮಾನ್ಯ ಅಧ್ಯಕ್ಷರೆ, ಕಾಪು ವಿಧಾನಸಭಾ ಕ್ಷೇತ್ರದ ಹಿರಿಯಡ್ಕ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು 1962ರ ನಿರ್ಮಿತ GOIP ಮಾದರಿಯ ಕಟ್ಟಡವಾಗಿದ್ದು, ಸದ(ಿ) ಕೇಂದ್ರದಲ್ಲಿ ಆಸ್ಪತ್ರೆಯ ಕಟ್ಟಡ, ಹೊಂದಿಕೆ ಕಟ್ಟಡ, ಲ್ಯಾಬೋರೇಟರಿ ವಿಭಾಗದ ಕಟ್ಟಡ, ವಾಹನ ತಂಗುವಿಕೆ ಕಟ್ಟಡ ಹಾಗೂ 8 ವಸತಿ ಗೃಹಗಳ ಕಟ್ಟಡವಿದ್ದು, ಹೆಂಚಿನ ಛಾವಣಿ ಹೊಂದಿದೆ. ಸದರಿ ಕಟ್ಟಡವು ಭಾಗಶ ' ದುರಸ್ತಿ ಮಾಡಬೇಕಾಗಿದೆ. ಈ ದುರಸ್ತಿ ಕಾಮಗಾರಿ ಸಲುವಾಗಿ ಪ್ರತಿ ಷ ರ್ಷ ಎನ್ಆರ್ಹೆಚ್ಎಂ ಅಡಿಯಲ್ಲಿ ಅನುದಾನ ನೀಡಲಾಗಿದ್ದು, ಅದರಲ್ಲಿ ದುರಸ್ತಿಯ ಅತಿವಶ್ಯಕ ಭಾಗಗಳನ್ನು ಸರಿಪಡಿಸಲಾಗುತ್ತಿದೆ. ಉಳಿದಂತೆ ಅ: ದಾನ ಲಭ್ಯತೆ ಆಧಾರದ ಮೇಲೆ ಪೂರ್ಣ ಪ್ರಮಾಣದ ದುರಸ್ತಿ ಕಾ: ರ್ಯ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸದರಿ ಪ್ರಾಥಮಿಕ ಆರೋಗ್ಯ ಕೆ: ತ್ರದಲ್ಲಿ 2 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು ಈ ಪೈಕಿ ಇಬ್ಬರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 11 ಇತರೆ ವಿವಿಧ ವೃಂದ ಹುದ್ದೆಗಳು

ಮಂಜೂರಾಗಿದ್ದು, 7 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 4 ಹುದ್ದೆಗಳು ಖಾಲಿ ಇವೆ.

**ಶ್ರೀ ಲಾಲಾಜಿ ಆರ್. ಮೆಂಡನ್** : ಮಾನ್ಯ ಅಧ್ಯಕ್ಷರೆ, ಕಾಪು ವಿಧಾನಸಭಾ ಕ್ಷೇತ್ರದ ಹಿರಿಯಡ್ಕ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ತುಂಬಾ ಸಮಸ್ಯೆ ಇದ್ದು ಅಲ್ಲಿ ದುರಸ್ತಿ ಹಾಗೂ ಸಿಬ್ಬಂದಿಗಳ ಕೊರತೆ ಇದೆ. ಸುಮಾರು 50 ವರ್ಷಗಳ ಹಿಂದಿನ ಹೆಂಚಿನ ಹಳೆಯ ಕಟ್ಟಡ ಇದೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಆ ಕಟ್ಟಡದ ದುರಸ್ತಿ ಹಾಗೂ ಸಿಬ್ಬಂದಿ ಕೊರತೆ ಇದೆ ಮತ್ತು ಪೇಷೆಂಟ್‌ಗಳಿಗೆ ತುಂಬಾ ತೊಂದರೆ ಆಗುತ್ತಿದೆ. ಈ ವಿಷಯವಾಗಿ ಜಿಲ್ಲಾ ಆರೋಗ್ಯ ಇಲಾಖೆಯವರ ಜೊತೆಗೆ ಸಂಪರ್ಕ ಮಾಡಿ ಅವರ ಜೊತೆಯಲ್ಲಿ ಮಾತುಕತೆ ಮಾಡಿದ್ದೇನೆ. ಸುಮಾರು ರೂ.30.14ಲಕ್ಷ ರೂ.ಗಳ ಒಂದು ನೀಲಿ ನಕ್ಷೆಯನ್ನು ತಯಾರಿಸಿರುತ್ತಾರೆ. ಅಲ್ಲಿ ಸುಮಾರು ಏಳೆಂಟು ಕಟ್ಟಡದಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆ ಆಸ್ಪತ್ರೆ ಹೆಂಚಿನದಾಗಿದ್ದು ಮಳೆಗಾಲದಲ್ಲಿ ತುಂಬಾ ಸೋರಿ ಅಲ್ಲಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ವೈದ್ಯಾಧಿಕಾರಿಗಳು ಮತ್ತು ಅಲ್ಲಿಯ ಸಿಬ್ಬಂದಿಗಳು ಹೇಳುತ್ತಿದ್ದಾರೆ. ಒಟ್ಟು 20 ಜನ ಸಿಬ್ಬಂದಿ ಇರಬೇಕು ಅದರಲ್ಲಿ ಬರೀ 12 ಜನ ಮಾತ್ರ ಸಿಬ್ಬಂದಿಗಳು ಇದ್ದಾರೆ. ಅಲ್ಲಿಗೆ ಸಿಬ್ಬಂದಿಗಳನ್ನು ಆದಷ್ಟು ಬೇಗನೆ ಭರ್ತಿ ಮಾಡಬೇಕು ಮತ್ತು ಆಸ್ಪತ್ರೆಯ ದುರಸ್ತಿಯನ್ನು ಆದಷ್ಟು ಬೇಗನೆ ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)** : ಮಾನ್ಯ ಅಧ್ಯಕ್ಷರೆ, ಕಾಪು ವಿಧಾನಸಭಾ ಕ್ಷೇತ್ರದ ಹಿರಿಯಡ್ಕ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಅದಕ್ಕೆ NRHM ಅಡಿಯಲ್ಲಿ ದುರಸ್ತಿ ಗೋಸ್ಕರ ಹಣವನ್ನು ಪ್ರತಿವರ್ಷದ maintenance ಹಣದಲ್ಲಿ ನೀಡಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಹಣದ ಅವಶ್ಯಕತೆ ಇದ್ದಲ್ಲಿ ನಿಶ್ಚಿತವಾಗಿ NRHM ನ

ಅಡಿಯಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸುವ ಕೆಲಸವನ್ನು ಮಾಡುತ್ತೇವೆ. ನಿನ್ನೆ ಕೂಡ ನಾನು ಪ್ರಶ್ನೋತ್ತರ ವೇಳೆಯಲ್ಲಿ ಹೇಳಿದ್ದೇನೆ. ಈ ವೈದ್ಯಾಧಿಕಾರಿಗಳ ವಿಷಯದಲ್ಲಿ ನಮ್ಮ ಆಕ್ಟ್ ಏನು ಪಾಸ್ ಆಗಿದೆ, ಆ ಆಕ್ಟ್‌ನ ಅಡಿಯಲ್ಲಿ ರಾಷ್ಟ್ರಪತಿಗಳ ಅಂಕಿತ ಆಗಿ ನಮಗೆ ಬಂದರೆ ಜನವರಿಯಿಂದ ವೈದ್ಯಾಧಿಕಾರಿಗಳ ಕೊರತೆ ಆಗುವುದಿಲ್ಲ. ತಾತ್ಕಾಲಿಕವಾಗಿ ಕಂಟ್ರಾಕ್ಟ್ ಬೇಸಿಸ್ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ಕೊಟ್ಟಿರುತ್ತೇವೆ. ಉಳಿದಂಥ ಸಿಬ್ಬಂದಿಯನ್ನು ತಕ್ಷಣದಲ್ಲೇ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆ. ಆ ನೇಮಕವಾದ ತಕ್ಷಣ ಅಲ್ಲಿಗೆ ಸಿಬ್ಬಂದಿಯನ್ನು ಹಾಕುವಂಥ ಕೆಲಸ ಕಾರ್ಯವನ್ನು ಮಾಡುತ್ತೇವೆ.

**ಅಧ್ಯಕ್ಷರು** : ಮಾನ್ಯ ಅಶೋಕ ಎಂ.ಪಟ್ಟಣ ಇಲ್ಲ, ಮಾನ್ಯ ಹೆಚ್.ಡಿ. ರೇವಣ್ಣರವರು ಇಲ್ಲ, ಮಾನ್ಯ ನೆ.ಲ. ನರೇಂದ್ರಬಾಬುರವರು ಇಲ್ಲ, ಮಾನ್ಯ ಕೆ. ಅಭಯಚಂದ್ರ, ಶ್ರೀ ಯು.ಟಿ. ಖಾದರ್, ಶ್ರೀ ಸಿದ್ದರಾಮಯ್ಯ, ಶ್ರೀ ಕೆ.ಎಂ. ಶಿವಲಿಂಗೇಗೌಡರವರು ಇಲ್ಲ. ಮಾನ್ಯ ಗೂಳಿಹಟ್ಟಿ ಡಿ.ಶೇಖರ್ ರವರು ಮಾನ್ಯ ಸಚಿವರ ಗಮನವನ್ನು ಸೆಳೆಯಿರಿ.

**2. ವಿಷಯ** : ಹೊಸದುರ್ಗ ತಾಲ್ಲೂಕಿನ ರಸ್ತೆ ಮತ್ತು ಸೇತುವೆ ಅಭಿವೃದ್ಧಿ ಯೋಜನೆ ಹಾಗೂ ಗ್ರಾಮೀಣ ಸಂಕರ್ಪ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡದಿರುವ ಬಗ್ಗೆ.

**ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)** :– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ 2010–11ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳಿಗೆ ಲೆಕ್ಕ ಶೀರ್ಷಿಕೆ 5054 ರಲ್ಲಿ ಸಣ್ಣ ಸಣ್ಣ ಕಂಟ್ರಾಕ್ಟ್‌ದಾರರು ಪ್ಯಾಕೇಜ್ ಟೆಂಡರ್ ಮೂಲಕ ಕೆಲಸವನ್ನು ಮಾಡಿ ಸುಮಾರು ಎರಡರಿಂದ ಎರಡೂವರೆ ವರ್ಷವಾದರೂ ಕೂಡ 1.22 ಕೋಟಿ ರೂ.ಗಳ ಬಿಲ್ ಬರಬೇಕಾಗಿದೆ. ಬಹಳಷ್ಟು ಸಾಲವನ್ನು ಮಾಡಿ ತೊಂದರೆಯಲ್ಲಿರುತ್ತಾರೆ. ದಯಮಾಡಿ ಬಾಕಿ ಬರಬೇಕಾದ ಈ ಬಿಲ್‌ನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.